ಅಧ್ಯಕ್ಷರು: ಮೂರನೇ ತಾರೀಖಿನ ದಿವಸ ಇದರ ಬಗ್ಗೆ ತೀರ್ಮಾನ ತೆಗೆದುಕೊಳ್ಳೋಣ. ಈಗ ಮಾನ್ಯ ಪ್ರಕಾಶ್ ಹುಕ್ಕೇರಿಯವರ ಗಮನ ಸೆಳೆಯುವ ಸೂಚನೆ ತೆಗೆದುಕೊಳ್ಳುತ್ತೇನೆ.

ಈ) ವಿಷಯ: ಬೆಳಗಾವಿ ಜಿಲ್ಲೆಯ ಚಿಂಚಲ ಮಾಯಕ್ಕನ ಜಾತ್ರೆಗೆ ಆಗಮಿಸುವ ಖಾಸಗಿ ವಾಹನಗಳಿಂದ ಹೆಚ್ಚಿನ ತೆರಿಗೆಯನ್ನು ಒತ್ತಾಯದಿಂದ ವಸೂಲಿ ಮಾಡಿರುವ ಬಗ್ಗೆ.

ಶ್ರೀ ಪ್ರಕಾಶ್ ಬಾಬಣ್ಣ ಹುಕ್ಕೇರಿ: ಮಾನ್ಯ ಅಧ್ಯಕ್ಷರೆ, ಬೆಳಗಾವಿ ಜಿಲ್ಲೆಯ ಚಿಂಚಲ ಮಾಯಕ್ಕನ ಜಾತ್ರೆಗೆ ಆಗಮಿಸುವ ಖಾಸಗಿ ವಾಹನಗಳಿಂದ ಹೆಚ್ಚಿನ ತೆರಿಗೆಯನ್ನು ಒತ್ತಾಯದಿಂದ ವಸೂಲಿ ಮಾಡಿರುವ ಮೂಲಕ ಸಾರಿಗೆ ಇಲಾಖೆ ಅಧಿಕಾರಿಗಳು ಕಿರುಕುಳ ನೀಡುತ್ತಿರುವ ಬಗ್ಗೆ ಮಾನ್ಯ ಸಾರಿಗೆ ಸಚಿವರ ಗಮನ ಸೆಳೆಯುತ್ತೇನೆ.

ಶ್ರೀ ಎಸ್. ಸುರೇಶ್ ಕುಮಾರ್ (ನಗರಾಭಿವೃದ್ಧಿ, ಕಾನೂನು, ನ್ಯಾಯ ಮತ್ತು ಮಾನವ ಹಕ್ಕುಗಳು ಹಾಗೂ ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ, ಪೌರಾಡಳಿತ ಮತ್ತು ಸ್ಥಳೀಯ ಸಂಸ್ಥೆಗಳು ಹಾಗೂ ಬೆಂಗಳೂರು ಜಲ ಮಂಡಳಿ ಸಚಿವರು): ಮಾನ್ಯ ಅಧ್ಯಕ್ಷರೆ, ಅಂತರ ರಾಜ್ಯ ಒಪ್ಪಂದದಂತೆ ಸರ್ಕಾರಿ ವಾಹನಗಳು ವಿಶೇಷ ಪರವಾನಗಿ ಪಡೆದು ತೆರಿಗೆ ವಿನಾಯಿತಿಯೊಂದಿಗೆ ಯಾತ್ರಾರ್ಥಿಗಳಿಗೆ ಸಾರಿಗೆ ಸೌಲಭ್ಯ ನೀಡಿದೆ. ಫೆಬ್ರವರಿ ತಿಂಗಳ 19 ರಿಂದ 21ರವರೆಗೆ (ಮೂರು ದಿನಗಳು) ಸಾರಿಗೆ ಇಲಾಖೆಯ ತನಿಖಾ ಕಾರ್ಯವನ್ನು ಹಮ್ಮಿಕೊಂಡಿತ್ತು. ತನಿಖೆಯ ಸಂದರ್ಭದಲ್ಲಿ ಖಾಸಗಿ ಒಪ್ಪಂದ ವಾಹನಗಳಿಂದ ಸರ್ಕಾರ ನಿಗದಿಗೊಳಿಸಿರುವ ತೆರಿಗೆಯನ್ನು ಮಾತ್ರ ಸಂಗ್ರಹಿಸಲಾಗಿದೆ. ತನಿಖೆಯ ಸಂದರ್ಭದಲ್ಲಿ ಕಿರುಕುಳ ನೀಡಿದ ಬಗ್ಗೆ ಯಾವುದೇ ದೂರು ಸ್ವೀಕೃತಿಯಾಗಿಲ್ಲ. ನಿರ್ದಿಷ್ಟವಾದ ದೂರು ನೀಡಿದಲ್ಲಿ ನಿಯಮಾನುಸಾರ ಅಗತ್ಯ ಕ್ರಮ ಕೈಗೊಳ್ಳಲಾಗುವುದು. ತನಿಖಾಯಿಸಿದ ವಿವರ.

No. of Cases booked	Tax Collected Rs.	CF Collected Rs.	Total Revenue Collected Rs.
192	8,85,115	3,64,360	12,49,475

ಯಾವುದೇ ರೀತಿಯ ದೂರು ಇಲಾಖೆ ಅಥವಾ ಸರ್ಕಾರದ ಗಮನಕ್ಕೆ ಬಂದಿಲ್ಲ. ನಿರ್ದಿಷ್ಟವಾದ ದೂರು ಕೊಟ್ಟರೆ ಅದರ ಬಗ್ಗೆ ಖಂಡಿತ ಕ್ರಮ ತೆಗೆದುಕೊಳ್ಳುತ್ತೇವೆ.

ಶ್ರೀ ಪ್ರಕಾಶ್ ಬಾಬಣ್ಣ ಹುಕ್ಕೇರಿ: ಮಾನ್ಯ ಅಧ್ಯಕ್ಷರೆ, ದೂರು ನೀಡಿರುವ ಬಗ್ಗೆ ವಿಜಯ ಕರ್ನಾಟಕ ಮತ್ತು ಸಂಯುಕ್ತ ಕರ್ನಾಟಕ ಪತ್ರಿಕೆಯಲ್ಲಿ ಬಂದಿದೆ. ಅಲ್ಲಿ ಅಧಿಕಾರಿಗಳು ಯಾವ ರೀತಿಯಾದ ಕಿರುಕುಳ ಕೊಟ್ಟಿದ್ದಾರೆಂಬ ಬಗ್ಗೆ ತಾವು ವಿಚಾರ ಮಾಡಬೇಕು. ಖಾಸಗಿ ವಾಹನಗಳು life long tax ಕಟ್ಟಿರುತ್ತಾರೆ. Life long tax ಇರುವಾಗ ಅವರ ಮೇಲೆ 192 ಕೇಸ್‌ಗಳನ್ನು ದಾಖಲು ಮಾಡತಕ್ಕಂಥ ಅವಶ್ಯಕತೆ ಏನಿತ್ತು? ಮಹಾರಾಷ್ಟ್ರದಿಂದ ಪಂಡರಾಪುರದ ಜಾತ್ರೆಗೆ ಮತ್ತು ಶಿರಡಿಗೆ ಕರ್ನಾಟಕದ ವಾಹನಗಳು ಹೋಗುತ್ತವೆ. ಕರ್ನಾಟಕದಲ್ಲಿ ಹಾಕುತ್ತಿರುವ ಟ್ಯಾಕ್ಸ್ ರೀತಿಯಲ್ಲಿ ಮಹಾರಾಷ್ಟ್ರ ಸರ್ಕಾರ ನಮ್ಮ ಕರ್ನಾಟಕದ ವಾಹನಗಳಿಗೆ ತೆರಿಗೆಯನ್ನು ಹಾಕಿದ್ದಾರೆಯೇ? ಇದರಿಂದ ಏನು ಪರಿಣಾಮವಾಗುತ್ತದೆಂಬುದನ್ನು ತಾವು ಅರ್ಥ ಮಾಡಿಕೊಳ್ಳಬೇಕು. 192 ಕೇಸ್‌ಗಳನ್ನು ಬುಕ್ ಮಾಡಿದರೆ ಹೇಗೆ? ಕೇಸ್ ಬುಕ್ ಮಾಡಿ ಹಣ ವಸೂಲಿ ಮಾಡುತ್ತಾರೆಂದು ಮುಂದಿನ ದಿನಗಳಲ್ಲಿ ಜಾತ್ರೆಗೆ ವಾಹನಗಳು ಬರುವುದಕ್ಕೆ ತಯಾರಿರುವುದಿಲ್ಲ. ಇದರಿಂದ ಏನಾಗುತ್ತದೆಂದರೆ, ಜಾತ್ರೆಯಲ್ಲಿರುವ ಹೋಟೆಲ್ ಇಟ್ಟಿರುವವರಿಗೆ ಮತ್ತು ಬಟ್ಟೆ ವ್ಯಾಪಾರ ಮಾಡುವುದಕ್ಕೆ ಬಂದಿರತಕ್ಕಂಥವರು ಹಾಗೂ ಇತರೇ ಎಲ್ಲಾ ವ್ಯಾಪಾರಗಳಿಗೆ ಲುಕ್ಸಾನುವಾಗುತ್ತದೆ. ಆದ್ದರಿಂದ, ಇದರ ಬಗ್ಗೆ ತಾವು ಗಂಭೀರವಾಗಿ ವಿಚಾರ ಮಾಡಬೇಕು. ಖಾಸಗಿ ವಾಹನಗಳು ಈ ಜಾತ್ರೆಗೆ ಬರಬಾರದೆಂದು ನೀವು ಮೊದಲೇ ಪತ್ರಿಕೆ ಮೂಲಕ ಅಥವಾ ಮಾಧ್ಯಮಗಳ ಮುಖಾಂತರ ಜಾಹೀರಾತನ್ನು ಕೊಡಬೇಕಾಗಿತ್ತು. ಒಮ್ಮಿಂದ ಒಮ್ಮೆಲೆ ಈ ರೀತಿಯಾಗಿ ಖಾಸಗಿ ವಾಹನಗಳ ಮೇಲೆ ಕೇಸ್ ಬುಕ್ ಮಾಡಿದರೆ ಹೇಗೆ? ಪ್ರತಿಯೊಬ್ಬ ಮನುಷ್ಯನ ಮೇಲೆ 350 ರೂಪಾಯಿ ಟ್ಯಾಕ್ಸ್ ಹಾಕಿದ್ದಾರೆ. ಮಹಾರಾಷ್ಟ್ರದಲ್ಲಿ ಈ ರೀತಿಯಾಗಿ ಯಾರೂ ಮಾಡುವುದಿಲ್ಲ. ಮಹಾರಾಷ್ಟ್ರದಲ್ಲಿರುವ ಪಂಡರಾಪುರ, ಶಿರಡಿ ಸಾಯಿಬಾಬಾ ಮತ್ತು ದುರ್ಗಾಪುರ ಜಾತ್ರೆಗಳಿಗೆ ಕರ್ನಾಟಕದಿಂದ ವಾಹನಗಳು ಹೋಗುತ್ತವೆ. ಈ ಸಂದರ್ಭದಲ್ಲಿ ಮಹಾರಾಷ್ಟ್ರ ಸರ್ಕಾರ ಒಂದು ಗಾಡಿಯ ಮೇಲೂ ಕೂಡ ಕೇಸ್ ಹಾಕುವುದಿಲ್ಲ. 3 ದಿವಸಗಳಲ್ಲಿ ಅಲ್ಲಿಂದ 15 ಲಕ್ಷ ರೂಪಾಯಿ ತೆರಿಗೆ ಹಣವನ್ನು ಸಂಗ್ರಹ ಮಾಡಿದ್ದೇವೆಂದು ತಾವು ಬಜೆಟ್‌ನಲ್ಲಿ ತೋರಿಸಬೇಕಾಗಿತ್ತು. ತೆರಿಗೆ ವಸೂಲಿ ಕಡಿಮೆ ಇದ್ದ ಪ್ರಯುಕ್ತ ಈ ರೀತಿಯ ಒಂದು ಉಪಾಯವನ್ನು ಹೂಡಿದ್ದೀರಾ ಹೊರತಾಗಿ ಬೇರೇನೂ ಕಾರಣ ಇಲ್ಲವೆಂದು ಜನರು ಮಾತನಾಡುತ್ತಿದ್ದಾರೆ. ಇದು ಬಹಳ ಗಂಭೀರವಾದಂಥ ವಿಚಾರವಾಗಿದೆ.

ಶ್ರೀ ಎಸ್. ಸುರೇಶ್ ಕುಮಾರ್: ಮಾನ್ಯ ಪ್ರಕಾಶ್ ಹುಕ್ಕೇರಿಯವರು ಹೇಳಿರತಕ್ಕಂಥ ವಿಚಾರ ಸತ್ಯಕ್ಕೆ ಬಹಳ ದೂರವಾದಂಥ ವಿಚಾರ. ಅದಕ್ಕೂ ಇದಕ್ಕೂ ಏನೂ ಸಂಬಂಧ ಇಲ್ಲ. ಅಂತರರಾಜ್ಯ ಒಪ್ಪಂದದ ಮೇಲೆ ಅವರು ತೆರಿಗೆ ವಿನಾಯಿತಿ ಪಡೆದು ರಾಜ್ಯಕ್ಕೆ ಪ್ರವೇಶ ಮಾಡುತ್ತಿದ್ದಾರೆ. ಯಾರ್ಯಾರು ತೆರಿಗೆ ವಿನಾಯಿತಿ ಪಡೆದಿರಲಿಲ್ಲವೋ ಅವರ ಮೇಲೆ ಈ ಕ್ರಮ ತೆಗೆದುಕೊಳ್ಳಲಾಗಿದೆ. ಯಾವುದಾದರೊಂದು ನಿರ್ದಿಷ್ಟವಾದ ಪ್ರಕರಣ ಇದ್ದರೆ ನಾವು ಖಂಡಿತವಾಗಿ ಕ್ರಮ ತೆಗೆದುಕೊಳ್ಳುತ್ತೇವೆ.

ಶ್ರೀ ಪ್ರಕಾಶ್ ಬಾಬಣ್ಣ ಹುಕ್ಕೇರಿ: ಮಾನ್ಯ ಸಚಿವರು ಸ್ಪಷ್ಟವಾದ ಉತ್ತರ ಕೊಡಲಿಲ್ಲ. ಇದು ಬಹಳ ಗಂಭೀರವಾದ ವಿಚಾರ.

ಅಧ್ಯಕ್ಷರು: ಕ್ಲಾರಿಫೈ ಮಾಡಿದ್ದಾರೆ. ಗಮನ ಸೆಳೆಯುವ ಸೂಚನೆಯಲ್ಲಿ ಈ ರೀತಿ ಚರ್ಚೆ ಮಾಡಿದರೆ ಹೇಗೆ? ಆ ರೀತಿಯಾದ ದೂರುಗಳಿದ್ದರೆ ಖಂಡಿತ ಕ್ರಮ ತೆಗೆದುಕೊಳ್ಳುತ್ತೇವೆಂದು ಮಾನ್ಯ ಸಚಿವರು ಸ್ಪಷ್ಟವಾಗಿ ಹೇಳಿದ್ದಾರೆ. ಆದ್ದರಿಂದ, ಇಂಥದು ತೊಂದರೆಯಾಗಿದೆ ಎಂದು ಸ್ಪೆಸಿಫಿಕ್ ಆಗಿ ಬರವಣಿಗೆಯಲ್ಲಿ ಕೊಡಿ.

ಶ್ರೀ ಪ್ರಕಾಶ್ ಬಾಬಣ್ಣ ಹುಕ್ಕೇರಿ: ಪೇಪರ್‌ನಲ್ಲಿ ಕೊಟ್ಟಿದ್ದೇವೆ.

ಅಧ್ಯಕ್ಷರು: ಪೇಪರ್‌ನಲ್ಲಿ ಕೊಟ್ಟರೆ, It can't be taken.

ಶ್ರೀ ಟಿ.ಬಿ. ಜಯಚಂದ್ರ: ಮಾನ್ಯ ಅಧ್ಯಕ್ಷರೆ, ಪತ್ರಿಕೆಯಲ್ಲಿ ಬಂದಿರುವಂಥದ್ದನ್ನು ಸರ್ಕಾರ ಗಮನಿಸದೆ ಇದ್ದಾಗ ನಿರ್ದಿಷ್ಟವಾಗಿ ಈ ರೀತಿಯ ಆರೋಪ ಬಂದಾಗ ಅವರನ್ನು ಕೇಳಿಕೊಂಡು ಬರುತ್ತೇವೆಂದು ಹೇಳಿದರೆ ಏನರ್ಥ? ಪತ್ರಿಕೆಯಲ್ಲಿ ಬಂದಿರುವಂಥ ಮಾಹಿತಿಯೇ ಸಾಕು. Information Departmentನವರು ಏನು ಕೆಲಸ ಮಾಡುತ್ತಿರುತ್ತಾರೆ? ಪತ್ರಿಕೆಯಲ್ಲಿ ಬಂದಿರತಕ್ಕಂಥದ್ದು it is a sufficient notice for the Government. Why do you require another complaint?

ಶ್ರೀ ಪ್ರಕಾಶ್ ಬಾಬಣ್ಣ ಹುಕ್ಕೇರಿ: ಖಾಸಗಿ ವಾಹನದವರು life long tax ಕಟ್ಟಿರುತ್ತಾರೆ. ಆದ್ದರಿಂದ, ನೀವು ಈ ರೀತಿ ಮಾಡಿದರೆ, ಮಹಾರಾಷ್ಟ್ರಕ್ಕೆ ನಮ್ಮ ವಾಹನಗಳು ಹೋದಾಗ ಅವರು ನಮ್ಮ ವಾಹನಗಳನ್ನು ಹಿಡಿದು ಟ್ಯಾಕ್ಸ್ ಹಾಕಬಹುದಲ್ಲವೆ?

ಶ್ರೀ ಎಸ್. ಸುರೇಶ್ ಕುಮಾರ್: ಸ್ಪಷ್ಟವಾದ ಒಂದು ಮಾತನ್ನು ಹೇಳುತ್ತೇನೆ. ತಾವು ದಯವಿಟ್ಟು ಬೇಜಾರು ಮಾಡಿಕೊಳ್ಳಬಾರದು. ವಿಶೇಷವಾಗಿ ಈ ರೀತಿಯ

ಜಾತ್ರೆಗೆ ಅಥವಾ ಧಾರ್ಮಿಕ ಕಾರ್ಯಕ್ರಮಕ್ಕೆ ಬಂದಂಥ ವಾಹನಗಳ ಮೇಲೆ ಒತ್ತಡ, ಕಿರುಕುಳ ಮಾಡಿಲ್ಲ. ಅನಧಿಕೃತವಾಗಿ ಯಾವುದು ವಾಹನಗಳು ಬಂದಿದ್ದವೋ ಅವರಿಂದ ನಿಗದಿ ಮಾಡಿರುವ ಹಣವನ್ನು ಸಂಗ್ರಹ ಮಾಡಿದ್ದೇವೆ. ಆದ್ದರಿಂದ ಸರ್ಕಾರ ಅವರಿಗೆ ಯಾವುದೇ ಒಂದು ಕಿರುಕುಳ ಕೊಟ್ಟಿಲ್ಲ. ತಾವು ಪತ್ರಿಕೆಯಲ್ಲಿ ಬಂದಿರುವ ವರದಿಯ ಬಗ್ಗೆ ಹೇಳುತ್ತಿದ್ದೀರಿ. ಅದರ ಬಗ್ಗೆ ಪರಿಶೀಲನೆ ಮಾಡಿ ಸೂಕ್ತವಾದ ಕ್ರಮವನ್ನು ತೆಗೆದುಕೊಳ್ಳುತ್ತೇವೆ.

ಅಧ್ಯಕ್ಷರು: ಆಯಿತು. ಈಗಾಗಲೇ ಹೇಳಿದ್ದಾರೆ. ಮತ್ತೆ ಮತ್ತೆ ನೀವು ಹೇಳಿರುವುದನ್ನೇ ಹೇಳಬೇಡಿ. ಈ ವಿಷಯವನ್ನು ಮುಕ್ತಾಯ ಮಾಡಿದ್ದೇವೆ. ಪತ್ರಿಕೆಯಲ್ಲಿ ಬಂದಿರುವುದನ್ನು ಗಮನಿಸಿ ಕ್ರಮ ತೆಗೆದುಕೊಳ್ಳುತ್ತೇವೆಂದು ಹೇಳಿದ್ದಾರೆ. ಆದ್ದರಿಂದ, ಈ ವಿಷಯವನ್ನು ಮುಗಿಸೋಣ. ಈಗ ವಿಧೇಯಕಗಳನ್ನು ಮಂಡಿಸುವುದು.

6. ಶಾಸನ ರಚನೆ

ವಿಧೇಯಕಗಳ ಮಂಡನೆ

ಅ) ಭಾರತ ರಾಷ್ಟ್ರೀಯ ಕಾನೂನು ವಿದ್ಯಾಲಯ (ತಿದ್ದುಪಡಿ) ವಿಧೇಯಕ 2011

ಶ್ರೀ ಎಸ್. ಸುರೇಶ್ ಕುಮಾರ್ (ನಗರಾಭಿವೃದ್ಧಿ, ಕಾನೂನು, ನ್ಯಾಯ ಮತ್ತು ಮಾನವ ಹಕ್ಕುಗಳು ಹಾಗೂ ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ, ಪೌರಾಡಳಿತ ಮತ್ತು ಸ್ಥಳೀಯ ಸಂಸ್ಥೆಗಳು ಹಾಗೂ ಬೆಂಗಳೂರು ಜಲ ಮಂಡಳಿ ಸಚಿವರು): ಮಾನ್ಯ ಅಧ್ಯಕ್ಷರೆ, 2011ನೇ ಸಾಲಿನ ಭಾರತ ರಾಷ್ಟ್ರೀಯ ಕಾನೂನು ವಿದ್ಯಾಲಯ (ತಿದ್ದುಪಡಿ) ವಿಧೇಯಕವನ್ನು ಮಂಡಿಸಲು ಅನುಮತಿ ಕೋರುತ್ತೇನೆ.

ಅಧ್ಯಕ್ಷರು: ಪ್ರಸ್ತಾವನೆ ಮಂಡಿಸಲಾಯಿತು. ಈಗ ಪ್ರಸ್ತಾವನೆಯನ್ನು ಸಭೆಯ ಮತಕ್ಕೆ ಹಾಕುತ್ತೇನೆ.

ಪ್ರಸ್ತಾವನೆ ಹೀಗಿದೆ:

2011ನೇ ಸಾಲಿನ ಭಾರತ ರಾಷ್ಟ್ರೀಯ ಕಾನೂನು ವಿದ್ಯಾಲಯ (ತಿದ್ದುಪಡಿ) ವಿಧೇಯಕವನ್ನು ಮಂಡಿಸಲು ಸಭೆಯು ಅನುಮತಿ ನೀಡಬೇಕು.

ಪ್ರಸ್ತಾವದ ಪರವಾಗಿರುವವರು "ಹೌದು" ಎಂದು ಸೂಚಿಸಬೇಕು.

ಪ್ರಸ್ತಾವದ ವಿರೋಧವಾಗಿರುವರು "ಇಲ್ಲ" ಎಂದು ಸೂಚಿಸಬೇಕು.

ಪ್ರಸ್ತಾವವು "ಹೌದು" ಎನ್ನುವವರ ಪರವಾಗಿದೆ.

ಪ್ರಸ್ತಾವವು "ಹೌದು" ಎನ್ನುವವರ ಪರವಾಗಿದೆ.

ಪ್ರಸ್ತಾವವು ಅಂಗೀಕೃತವಾಗಿದೆ.

ಮಾನ್ಯ ಸಚಿವರು ಈಗ ದಯವಿಟ್ಟು ವಿಧೇಯಕವನ್ನು ಮಂಡಿಸಬೇಕು.